## 23

# ಸ್ನಾನಿಕನಾದ ಯೋಹಾನ ಮತ್ತು ಯೇಸು

## (11:1-19)

ಯೇಸುವಿನ ಬೋಧನೆಗೆ ಮತ್ತು ಕಾರ್ಯಗಳಿಗೆ ಜನರು ಹೊಂದಿರುವ ಪ್ರತಿಕ್ರಿಯೆಗಳ ಕುರಿತು ಮತ್ತಾಯನು ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದ್ದಾನೆ. ಈ ಪ್ರತಿಕ್ರಿಯೆಗಳು ಕೆಲವು ಸಾರಿ ಅನುಕೂಲಕರವಾಗಿರುವದಿಲ್ಲ. ಸ್ನಾನಿಕನಾದ ಯೋಹಾನನು ಸಹ ಕರ್ತನನ್ನು ಪ್ರಶ್ನಿಸಿದನು.[1] ಯೋಹಾನ ಮತ್ತು ಯೇಸುವಿನ ಚರ್ಚೆ ಮತ್ತಾಯನು ಮಾಡಿದ ತರುವಾಯ (11:1-19), ಆತನು ಪಶ್ಚಾತ್ತಾಪ ಪಡದ ಪಟ್ಟಣಗಳ ಜನರು ಯೇಸುವಿಗೆ ನಿಂದಿಸಿರುವದನ್ನು ವರದಿಮಾಡಿದ್ದಾನೆ (11:20-24), ಯೇಸುವಿನ ಪ್ರಾರ್ಥನೆ ದಾಖಲಿಸಿದ್ದಾನೆ, ಮತ್ತು ಎಲ್ಲರು ಆತನೆಡೆಗೆ ಬರುವದಕ್ಕಾಗಿ ಎಲ್ಲರಿಗೆ ಶ್ರೇಷ್ಠ ಆಹ್ವಾನವನ್ನು ಕೊಟ್ಟಿರುವ ಸಂಗತಿಯನ್ನು ಚಿತ್ರಿಸಿದ್ದಾನೆ (11:25-30).

### ಯೋಹಾನ ಪ್ರಶ್ನೆ (11:1-3)

**[1]ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರಿಗೆ ಹೇಳಬೇಕಾದದ್ದನ್ನು ಹೇಳಿ ಮುಗಿಸಿದ ಬಳಿಕ ಅಲ್ಲಿಯವರ ಊರುಗಳಲ್ಲಿ ಉಪದೇಶಮಾಡುವದಕ್ಕೂ ಸುವಾರ್ತೆಯನ್ನು ಸಾರುವದಕ್ಕೂ ಅಲ್ಲಿಂದ ಹೊರಟನು.**

**[2]ಯೋಹಾನನು ಕ್ರಿಸ್ತನ ಕಾರ್ಯಗಳ ಸುದ್ದಿಯನ್ನು ಸೆರೆಮನೆಯಲ್ಲಿ ಕೇಳಿ ಆತನ ಬಳಿಗೆ ಶಿಷ್ಯರನ್ನು ಕಳುಹಿಸಿ - [3]ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ ಎಂದು ಕೇಳಿಸಿದನು.**

**ವಚನ 1.** ಈ ಮಾತುಗಳೊಂದಿಗೆ, ಯೇಸು ತನ್ನ **ಹನ್ನೆರಡು ಜನ ಶಿಷ್ಯರಿಗೆ ಹೇಳಬೇಕಾದದ್ದನ್ನು** ಮುಕ್ತಾಯ ಮಾಡಿದನೆಂದು ಮತ್ತಾಯನು ತಿಳಿಸುತ್ತಾನೆ. ಇದನ್ನು ಮಾಡಿದ ನಂತರ, ಯೇಸು ಇತರರೊಂದಿಗೆ ಪರಸ್ಪರ ಪ್ರತಿಕ್ರಿಯಿಸುವದರ ಬಗ್ಗೆ 11 ಮತ್ತು 12ನೇ ಅಧ್ಯಾಯದಲ್ಲಿ ಪ್ರಾರಂಭಮಾಡಿದನು. Jack P. Lewis ರವರು ಹೀಗೆ ವಿಮರ್ಶಿಸಿದ್ದಾರೆ,

> Stephen Langtonನಿಂದ 1228ರಲ್ಲಿ ಒದಗಿಸಿರುವದು 10 ಮತ್ತು 11ನೇ ಅಧ್ಯಾಯಗಳ ವಿಭಜನೆಯು ಒಳ್ಳೆಯ ಸೂಚನೆ ಆಗಿರಲಿಲ್ಲ, ಏಕೆಂದರೆ, ವಾಸ್ತವವಾಗಿ ಈ ಮೊದಲಿನ ವಚನವು 10ನೇ ಅಧ್ಯಾಯದ ಮುಕ್ತಾಯದಂತೆ ಇದೆ. ಮತ್ತಾಯನು ಬರೆದ ಸುವಾರ್ತೆಯಲ್ಲಿ ಉಪದೇಶ ವಿಭಾಗ ಮುಕ್ತಾಯ ಮಾಡುವ ಐದು ವಾಕ್ಯಗಳಲ್ಲಿ ಇದು 2ನೇ ವಾಕ್ಯವಾಗಿದೆ (ಹೋಲಿಸಿ. 7:28f.; 13:53; 19:1; 26:1).[2]

11:1ರಲ್ಲಿ ಹೇಳಿರುವ ಕುರಿತು ಇರುವ ಪ್ರಸ್ತಾವನೆ, "ಆತನ ಹನ್ನೆರಡು ಜನ ಶಿಷ್ಯರು" 10:1ರಲ್ಲಿ ಇರುವದು ಒಂದೇ ರೀತಿಯಾಗಿವೆ ಎಂದು ಗುರುತಿಸಲಾಗಿದೆ, ಈ ಎರಡು ಭಾಗಗಳು 10ನೇ ಅಧ್ಯಾಯದ ಮುಕ್ತಾಯಕ್ಕೆ (bookends) ಜೋಡಣೆಯಾಗುತ್ತವೆ.

ಮತ್ತಾಯನು ವಾಸ್ತವವನ್ನು ನೇರವಾಗಿ ಸ್ಪಷ್ಟವಾಗಿ ಹೇಳಿರಲಿಲ್ಲವಾದರೂ, ಶಿಷ್ಯರು ಹೋದ ತರುವಾಯ, ಅವರು ಯೇಸು ಏನು ಮಾಡಬೇಕೆಂದು ಅಪ್ಪಣೆಯೊಂದಿಗೆ ಅಧಿಕಾರವನ್ನು ಕೊಟ್ಟಿದ್ದನೋ ಅದನ್ನು ಮಾಡಲು ಮುಂದೆ ಹೋದರು (ಮಾರ್ಕ 6:12,

13; ಲೂಕ 9:6). ಕೊನೆಪಕ್ಷ, ಸ್ವಲ್ಪಕಾಲವಾದರೂ **ಯೇಸು** ಒಬ್ಬಂಟಿಗನಾಗಿ ಸೇವೆ ಮಾಡಿರುವದು ಕಾಣಿಸುತ್ತದೆ. ಬಹುಶಃ ಆತನು ಶಿಷ್ಯರುಗಳು ಹೋದ ದಾರಿಯಲ್ಲಿಯೇ ಹಿಂಬಾಲಿಸಿರಬಹುದು (10:23 ಮೇಲಿನ ವ್ಯಾಖ್ಯಾನ ನೋಡಿರಿ).

**ಆತನು ಅಲ್ಲಿಂದ ಹೊರಟು ಹೋದನು** ಮತ್ತು ಇತರ ಸಮವಾಗಿರುವ ವಾಕ್ಯಭಾಗಗಳು ಸಾಮಾನ್ಯವಾಗಿ ಜೋಡಿಸುವ ವಿಷಯವನ್ನಾಗಿ ಮತ್ತಾಯನ ಸುವಾರ್ತೆಯಲ್ಲಿ ಉಪಯೋಗಿಸಲಾಗಿದೆ (12:9; 13:53; 15:29; 19:1). **ಪಟ್ಟಣಗಳಲ್ಲಿ ಉಪದೇಶಿಸಲು ಮತ್ತು ಸಾರುವದಕ್ಕಾಗಿ** ಯೇಸು ಅಲ್ಲಿಂದ ಆ ಸ್ಥಳವನ್ನು ಬಿಟ್ಟು ಹೋಗಿರುವ ಉದ್ದೇಶವಾಗಿತ್ತು (4:23; 9:35ರ ಮೇಲಿನ ವ್ಯಾಖ್ಯಾನ ನೋಡಿರಿ). "ಉಪದೇಶ" ಮತ್ತು "ಸಾರುವದು" ಒಂದೇ ರೀತಿ ಯಾಗಿರುತ್ತವೆ, ಅವುಗಳು ವ್ಯತ್ಯಾಸವುಳ್ಳವುಗಳಾಗಿ ಇರಬಹುದು. "ಸಾರುವದು" ಮುಖ್ಯವಾಗಿ ದೇವರ ವಾಕ್ಯವನ್ನು ಪ್ರಚಾರಮಾಡುವದನ್ನೇ ಕೇಂದ್ರಿಕರಿಸುತ್ತದೆ, ಹಾಗೆಯೇ "ಉಪದೇಶ" ಹೆಚ್ಚಿನ ಆಳವಾದ ವಿವರಣೆ ಕೊಡುವದನ್ನು ಒಳಗೊಂಡಿರುತ್ತದೆ. ಈ ಸಾರಂಶದಲ್ಲಿ "ಸ್ವಸ್ಥತೆ" ಎನ್ನುವದು ಸ್ಪಷ್ಟವಾಗಿ ಕಾಣಿಸುವದಿಲ್ಲ.

**ವಚನ 2.** ಮತ್ತಾಯನ ಪ್ರಕಾರ **ಯೋಹಾನನು ಸೆರೆಮನೆಯದಲ್ಲಿದ್ದನು** ಎನ್ನುವದು ಮೂರು ಸಾರಿ ಪ್ರಸ್ತಾಪಿಸಲಾಗಿದೆ (4:12; 11:2; 14:3). Josephus ರವರ ಪ್ರಕಾರ, Herod Antipas ಅವನು ಯೋಹಾನನನ್ನು Machaerus (ಅಥವಾ Macherus) ಸೈನಿಕರ ರಕ್ಷಣ ಕೋಟೆಯಲ್ಲಿ ಬಂದಿಸಿ ಇಟ್ಟನು ಈ ಸ್ಥಳವು ಸುತ್ತ ಸಮುದ್ರದ[3] ಪೂರ್ವದಲ್ಲಿ, ದಕ್ಷಿಣ ಪೆರಿಯಾದಲ್ಲಿ ಇರುತ್ತದೆ. ಹೆರೋದ ಮಹಾರಾಜನು ಕಟ್ಟಿಸಿದ ಅನೇಕ ಕೋಟೆಗಳಲ್ಲಿ ಇದು ಸಹ ಒಂದು ಆಗಿತ್ತು. ಇದನ್ನು ಪಾಲೇಸ್ತೀನ ಪೂರ್ವಭಾಗದ ಗಡಿಯ ರಕ್ಷಣೆಗಾಗಿ ಉಪಯೋ ಗಿಸುತ್ತಿದ್ದನು. Michael J. Wilkins ರವರು ಹೀಗೆ ಬರೆದಿದ್ದಾರೆ, "ಈ ಕೋಟೆಯ ಹೆಸರು ಬಹುಶಃ *machaira*, 'dagger' ನಿಂದ ತೆಗೆದುಕೊಳ್ಳಲಾಗಿದೆ, ಮತ್ತು ಇದು ಸಮುದ್ರ ಮಟ್ಟಕ್ಕೆ 700 ಮೀಟರ್‌ಗಳಷ್ಟು (1600 ಅಡಿಗಳು) ಎತ್ತರವರೆಗೆ ನೇರವಾಗಿ ಬಂಡೆಗುಡ್ಡದ ಪ್ರಪಾತದ ಮೇಲೆ ನಿಂತುಕೊಂಡಿದೆ. ಈ ಪ್ರಪಾತದ ಭಾಗಗಳು ಸಮುದ್ರದ ಮೂರು ಭಾಗದಲ್ಲಿ ಆಳವಾದ ಕೊರಕಲುಗಳಿಂದ ಕೂಡಿದ್ದು ಇದರಿಂದ ಈ ಸ್ಥಳ ಸುರಕ್ಷಿತವಾಗಿದೆ."[4]

ಹೆರೋದ ರಾಜನು ಮತ್ತು ಅಣ್ಣನ ಹೆಂಡತಿ ಹೆರೋದ್ಯಳ ಮಧ್ಯ ಅಪರಾಧ ಪ್ರವೃತ್ತಿಯ ಮದುವೆ ಆಗಿದ್ದರಿಂದ ರಾಜನನ್ನು ಯೋಹಾನನು ಧೈರ್ಯದಿಂದ ನಿಂದಿಸಿ ಆರೋಪಿಸಿದರಿಂದ ಯೋಹಾನನು ಸೆರೆಯಲ್ಲಿ ಹಾಕಲ್ಪಟ್ಟನು (ಲೂಕ 3:19, 20; ನೋಡಿರಿ ಯಾಜಕಕಾಂಡ 18:16). ಆಕೆಯು ಮಲ ಸಹೋದರನಾದ Aristobulus, ಮಗಳು, ಮತ್ತು ಈಕೆಯನ್ನು ತನ್ನ ಸಹೋದರನಾದ ಹೆರೋದ ಫಿಲಿಪ್ಪನು ಮದುವೆ ಮಾಡಿಕೊಂಡಿದ್ದನು. ರೋಮಗೆ ಪ್ರವಾಸ ಹೋದಾಗ Herod Antipas ಆಕೆಯೊಂದಿಗೆ ಮೋಹದ ಪಾಶಕ್ಕೆ ಒಳಗಾಗುತ್ತಾನೆ, ದುರ್ಮಾಗದಲ್ಲಿ ಬೀಳಿಸುತ್ತಾನೆ, ಮತ್ತು ಅವನು ಮನೆಗೆ ಬಂದ ತಕ್ಷಣವೇ ಹೆಂಡತಿಗೆ ವಿಚ್ಛೆದನ ಕೊಡುತ್ತಾನೆ ಮತ್ತು ಹೆರೋದ್ಯಳನ್ನು ಮದುವೆ ಮಾಡಿಕೊಳ್ಳುತ್ತಾನೆ. ಅವನು ಜನರಿಗೆ ಹೆದರಲಿಲ್ಲ, ಹೆರೋದನು ಯೋಹಾನನ್ನು ಗಲ್ಲಿಗೇರಿಸಬೇಕೆಂದಿದ್ದನು (14:5).

ಸಹಜವಾಗಿ ಯೋಹಾನನ ಕೆಲವು **ಶಿಷ್ಯರು** ಯೇಸುವಿನ ಚಟುವಟಿಕೆಗಳು ಗಮನಿಸಿ ಅದೆಲ್ಲವನ್ನು ಯೋಹಾನನಿಗೆ ತಿಳಿಸುತ್ತಿದ್ದರು. ಯೇಸುವನ್ನು ಭೇಟಿಯಾದಾಗ (9:14), ಉಪವಾಸದ ಕುರಿತು ಯೇಸುವಿಗೆ ಪ್ರಶ್ನೆ ಕೇಳಿದರು. ಅಷ್ಟು ಮಾತ್ರವಲ್ಲದೆ, ನಾಯಿನ್ ಎಂಬ ಊರಲ್ಲಿ ಯೇಸು ಒಬ್ಬ ವಿಧವೆಯ ಮಗನನ್ನು ಮರಣದಿಂದ ಎಬ್ಬಿಸಿದ ತರುವಾಯ, "ಈ ಎಲ್ಲಾ ವಿಷಯಗಳ ಕುರಿತಾಗಿ ಅವರು ಯೋಹಾನನಿಗೆ ಹೇಳಿದರು" (ಲೂಕ 7:18). **ಕ್ರಿಸ್ತನ ಕಾರ್ಯಗಳ** ಕುರಿತಾಗಿ ಕೇಳಿದ ತಕ್ಷಣವೆ ನಿಧಾನ ಮಾಡದೆ ಯೋಹಾನನು ತನ್ನ ಶಿಷ್ಯರ ಗುಂಪನ್ನು ಯೇಸುವಿನಲ್ಲಿಗೆ ಕಳುಹಿಸಿ ಆತನೇ ಕ್ರಿಸ್ತನೆಂದು ದೃಢಪಡಿಸಿಕೊಳ್ಳಲು ತಿಳಿಸಿದನು.

**ವಚನ 3.** ಯೋಹಾನನು ಕಳುಹಿಸಿದ ಸಂದೇಶ ಹೀಗಿತ್ತು: **ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ ಎಂದು ಕೇಳಿಸಿದನು.** ಯೋಹಾನನು ಸಂಬಂಧಿಕನಾಗಿರುವದರಿಂದ ಯೇಸು ಯಾರೆಂದು ಆತನಿಗೆ ತಿಳಿದಿತ್ತು (ಲೂಕ 1:36). ಯೋಹಾನನು ಆತನನ್ನು ಒಪ್ಪಿಕೊಂಡು "ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು" ಎಂದು ಹೇಳಿದನು (ಯೋಹಾನ 1:29) ಮತ್ತು ದೇವರಾತ್ಮವು "ಪಾರಿವಾಳದಂತೆ ಆಕಾಶದಿಂದ" ಇಳಿಯುವದನ್ನು ಮತ್ತು ಅದು ಆತನ ಮೇಲೆ ನೆಲೆಗೊಂಡಿರುವದನ್ನು ನೋಡಿದನು (ಯೋಹಾನ 1:32). "ಆತನು ವೃದ್ಧಿಯಾಗಬೇಕು, ಆದರೆ ನಾನು ಕಡಿಮೆಯಾಗಬೇಕು" ಎಂದು ಯೋಹಾನನು ಇದನ್ನು ಸಹ ಪ್ರಕಟಿಸಿದ್ದಾನೆ (ಯೋಹಾನ 3:30). ಈಗ ಯಾಕೆ ಯೋಹಾನನಿಗೆ ಸಂಶಯಗಳು ಇರುವಂತೆ ಕಾಣಿಸುತ್ತವೆ?

ಅನೇಕ ಸಾಧ್ಯತೆಗಳು ಅಲ್ಲಿ ಕಾಣಿಸುತ್ತವೆ. ಬಹುಶಃ ಈ ಪ್ರಶ್ನೆ ಯೋಹಾನನ ಶಿಷ್ಯರ ಲಾಭಕ್ಕಾಗಿಯೇ ಎದ್ದಿದೆ ಹೊರತು ಯೋಹಾನನ ಸ್ವಂತಕ್ಕಾಗಿ ಅಲ್ಲ. ಕೆಲವು ಯೋಹಾನನ ಶಿಷ್ಯರು ಯೇಸುವಿನ ಶಿಷ್ಯರಲ್ಲಿ ಸೇರದಿರಲು ನಿರ್ಧರಿಸಿದರು ಮತ್ತು ಯೋಹಾನನೊಂದಿಗೆ ಉಳಿದುಕೊಂಡರು ಅವರೇ ಬಹುಶಃ ಯೇಸು ಯಾರು ಎಂದು ಕೇಳಿರಬಹುದು. ಇದು ಅವಸರದ ಪ್ರಶ್ನೆ ಎಂದು ಇತರರು ಯೋಚಿಸಿದರು - ಯೋಹಾನನು ಅಡವಿಯಲ್ಲಿ ಸಾರಿದ ಪ್ರವಾದನೆಗಳನ್ನು ಯೇಸು ಯಾವಾಗ ಕಾರ್ಯಸಿದ್ಧಿ ಮಾಡುವನೋ ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು (3:7-12). ಯೋಹಾನನು ಈಗಾಗಲೇ ಆತನು ನಂಬಿದ ವಿಷಯವನ್ನು ದೃಢಪಡಿಸಿಕೊಳ್ಳಬೇಕಿತ್ತು ಅದಕ್ಕಾಗಿಯೇ ಈ ಪ್ರಶ್ನೆ ಯೋಹಾನನು ಕೇಳಿರುವ ಸಾಧ್ಯತೆ ಇದೆ ಎನ್ನುವದು ಇನ್ನೊಂದು ಅಂಶವಾಗಿದೆ.

ಯೋಹಾನನ ಸನ್ನಿವೇಶದಿಂದ ಉತ್ತಮವಾದ ವಿವರಣೆ ಇದೆ. ಯೋಹಾನನು ಹೆದರಿಕೆ ಇಲ್ಲದೆ ಹೆರೋದ ಅಂತಿಪನ ಅನೀತಿಯ ಮದುವೆಯನ್ನು ಬಹಿರಂಗವಾಗಿ ಖಂಡಿಸಿ ಸೆರೆಮನೆಗೆ ಹಾಕಿಸಲ್ಪಟ್ಟು ಸತ್ಯವನ್ನು ಸಾರುವವನಾಗಿ ಮತ್ತು ನಂಬಿಗಸ್ತನಾಗಿದ್ದನು. ಆ ಸಮಯದಲ್ಲಿ ಆತನಿಗೆ ಒಂದು ಕ್ಷಣ ಸಂಶಯ ಬಂದಿರಬಹುದು ಮತ್ತು ಆತನು ಒಬ್ಬನು ಬರುವಾತನಿಗಾಗಿ ಮಾರ್ಗವನ್ನು ಸಿದ್ಧಮಾಡಲು ಅವಶ್ಯವಾದ ಕಾರ್ಯಗಳನ್ನು ಮಾಡಿದ್ದನು ಅದನ್ನು ಪುನಃ ಖಚಿತ ಪಡಿಸಿಕೊಳ್ಳುವದಕ್ಕಾಗಿ ಪ್ರಶ್ನೆಯ ಅವಶ್ಯಕತೆ ಬಂದಿರಬಹುದು.

"ಬರಬೇಕಾದವನು," ಅಥವಾ "ಬರುವವನು" (NKJV), ಮೆಸ್ಸೀಯನಿಗೆ ಬಿರುದಾಗಿ ಉಪಯೋಗಿಸಲಾಗಿದೆ, ಇದರಿಂದ ಆತನು ಬರೋಣದ ಕುರಿತು ಬಹಳ ಹಿಂದಿನಿಂದಲೂ ಇಸ್ರಾಯೇಲರಿಂದ ಪೂರ್ವನಿರೀಕ್ಷೆಯಲ್ಲಿದ್ದರು (ಕೀರ್ತನೆ 118:26). ಈ ಪದವು ಬಹಳ ಯೆಹೂದ್ಯರಿಗೆ ಚಿರಪರಿಚಯವಾಗಿತ್ತು (ಮತ್ತಾಯ 3:11; 21:9; 23:39; ಯೋಹಾನ 4:25; 6:14; 11:27; 12:13).

## ಯೇಸುವಿನ ಉತ್ತರ (11:4-6)

**4ಆತನು ಅವರಿಗೆ ಪ್ರತ್ಯುತ್ತರವಾಗಿ - ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತವೆ; ಕುಷ್ಠರೋಗಿಗಳು ಶುದ್ಧರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತವೆ; 5ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ; ನೀವು ಹೋಗಿ ಕಂಡು ಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ. 6ನನ್ನ ವಿಷಯದಲ್ಲಿ ಸಂಶಯಪಡದವನೇ ಧನ್ಯನು ಎಂದು ಹೇಳಿದನು.**

**ವಚನ 4.** ಯೋಹಾನನ ಶಿಷ್ಯರಿಗೆ ಸರಳವಾದ ಉತ್ತರ "ಹೌದು" ಅಥವಾ "ಇಲ್ಲಾ" ಎಂದು ಯೇಸು ಹೇಳಲಿಲ್ಲ. ಅದರ ಬದಲಾಗಿ, ಆತನು ಅವರಿಗೆ ಅನುಭವವಾಗಿರುವ

ನಿಶ್ಚಿತವಾದ ಸಾಕ್ಷಿಗಳನ್ನು ಒದಗಿಸಿದನು. ರೋಗ ಉಪದ್ರವ ದೆವ್ವ ಇಂಥವುಗಳಿಂದ ಬಿಡಿಸಿ ವಾಸಿ ಮಾಡಿದನು; ಮತ್ತು ಅನೇಕ ಮಂದಿ ಕುರುಡರಿಗೆ ಕಣ್ಣನ್ನು ದಯಪಾಲಿಸಿದನು ಎಂದು ಲೂಕನು ದಾಖಲಿಸಿದ್ದಾನೆ (ಲೂಕ 7:21). ಆಗ ಯೋಹಾನನ ಶಿಷ್ಯರಿಗೆ, **ಆತನು ಅವರಿಗೆ ಪ್ರತ್ಯುತ್ತರವಾಗಿ - ಕುರುಡರಿಗೆ ಕಣ್ಣು ಬರುತ್ತವೆ** ಎಂದು ಹೇಳಿದನು. ಈ ಪದಗಳು "ಕೇಳಿ" ಮತ್ತು "ನೋಡಿ" ಎನ್ನುವಂಥವುಗಳು ಕ್ರಮವಾಗಿ ಮತ್ತಾಯನು ತನ್ನ ಸುವಾರ್ತಾ ರಚನೆಯಲ್ಲಿ ಉಪಯೋಗಿಸಿದ್ದಾನೆ. ಮೊದಲನೆಯದು, ಆತನು ಯೇಸುವಿನ ಬೋಧನೆಗಳನ್ನು 5 ರಿಂದ 7 ನೇ ಅಧ್ಯಾದವರೆಗೆ ಹೇಳಿದ್ದಾನೆ ("ಕೇಳಿ") ಯೇಸುವಿನ ಅದ್ಭುತಗಳು 8 ಮತ್ತು 9ನೇ ಅಧ್ಯಾಯದಲ್ಲಿ ("ನೋಡು") ದಾಖಲಿಸಿದ್ದಾನೆ.[5] ಲೂಕ 7:22ರಲ್ಲಿ ಅದು ಒಂದಕ್ಕೊಂದು ಬದಲಾಗಿ ಆ ವಾಕ್ಯಭಾಗದಲ್ಲಿ "ಕಂಡವುಗಳು" ಮತ್ತು "ಕೇಳಿಸಿಕೊಂಡವುಗಳು" ಎನ್ನುವ ಶಬ್ದಗಳು ಬಂದಿವೆ.

**ವಚನ 5.** ಯೋಹಾನನ ಶಿಷ್ಯರ ಸಮಕ್ಷಮದಲ್ಲಿ ಯೇಸು ಮಾಡಿರುವ ಅದ್ಭುತಗಳ ಕುರಿತು ಯೆಶಾಯನು ತನ್ನ ಪ್ರವಾದನೆಯಲ್ಲಿ ಮೆಸ್ಸೀಯನು ಬರುವಾಗ ಇಂಥಹ ಅದ್ಭುತ ಕಾರ್ಯಗಳನ್ನು ಮಾಡುವನು ಎಂದು ಪ್ರವಾದಿಸಿದನು (ಯೆಶಾಯ 29:18, 19; 35:5, 6; 61:1). ಈ ಅದ್ಭುತಗಳನ್ನು ಮೂರು ಗುಂಪುಗಳಾಗಿ ಮಾಡಲಾಗಿದೆ, ಮತ್ತು ಅವುಗಳನ್ನು ಮತ್ತಾಯ 8 ಮತ್ತು 9ನೇ ಅಧ್ಯಾಯದಿಂದ ವಿವರಿಸಲಾಗಿದೆ: (1) **ಕುರುಡನು ದೃಷ್ಟಿಯನ್ನು ಹೊಂದಿಕೊಂಡದ್ದು** (9:27-31) ಮತ್ತು **ಕುಂಟನೊಬ್ಬನು ನಡೆದಾಡಿದನು** (8:5-13; 9:2-8); (2) **ಕುಷ್ಟರೋಗಿಗಳು ಶುದ್ಧರಾದರು** (8:1-4) ಮತ್ತು **ಕಿವುಡರು ಕೇಳಿಸಿಕೊಂಡರು** (ನೋಡಿರಿ 9:32-34); (3) **ಸತ್ತವರು ಎದ್ದೆದ್ದು** (9:18-26) ಮತ್ತು **ಬಡವರಿಗೆ ಸುವಾರ್ತೆ ಸಾರಲ್ಪಡುವದು** (9:35). ಯೇಸುವಿಗೆ ವಿರೋಧವಾಗಿ, ಯೋಹಾನನು ತನ್ನ ಸೇವೆಯ ಅವಧಿಯಲ್ಲಿ ಯಾವುದೇ ಅದ್ಭುತಗಳನ್ನು ಮಾಡಲಿಲ್ಲ (ಯೋಹಾನ 10:41).

**ವಚನ 6.** ಧನ್ಯತೆಗಳೊಂದಿಗೆ ಯೇಸು ತನ್ನ ಉತ್ತರವನ್ನು ಮುಕ್ತಾಯ ಮಾಡಿದನು: **ನನ್ನ ವಿಷಯದಲ್ಲಿ ಸಂಶಯಪಡದವನೇ ಧನ್ಯನು ಎಂದು ಹೇಳಿದನು.** "ಹದಗೆಡು" (*skandalizā*) ಗ್ರೀಕ್ ಕ್ರಿಯಾಪದವು ಇದನ್ನು ನಾಮಪದಕ್ಕೆ ಅನುವಾದಿಸಿರುವ "**ಅಡಚಣೆ**" (*skandalon*)ಗೆ ಸಂಬಂಧಪಟ್ಟದ್ದಾಗಿದೆ. ಮೆಸ್ಸೀಯನ ಕುರಿತು ಈಗಾಗಲೇ ಯೋಹಾನನ ಪೂರ್ವ ಅಭಿಪ್ರಾಯಕ್ಕೆ ಮನ್ನಣೆ ಸಿಗದೆ ಯೇಸುವಿನಲ್ಲಿಟ್ಟಿರುವ ನಂಬಿಕೆಗೆ ಅಡಚಣೆಯುಂಟಾಯಿತು[6] ಎಂದು ಬೇರೆ ಪದಗಳಲ್ಲಿ ಹೇಳಬಹುದಾಗಿದೆ.

ಯೇಸು ಯಾರಾಗಿದ್ದನು ಅಥವಾ ಆತನು ಏನು ಮಾಡಿದ ಎಂಬ ಕಾರಣಕ್ಕಾಗಿ ಅನೇಕರು ಯೇಸುವನ್ನು ನಿರಾಕರಿಸಿದರು. ಕೆಲವು ಶಿಷ್ಯರು ಆತನ ಕಠಿಣವಾದ ಬೋಧನೆಗೆ ಅಡ್ಡಿಪಡಿಸಿದರು ಮತ್ತು ಆತನನ್ನು ಹಿಂಬಾಲಿಸುವದನ್ನು ಬಿಟ್ಟು ಬಿಟ್ಟರು (ಯೋಹಾನ 6:60, 61, 66). ನಜರೇತಿನ ಊರಿನವರು, ಆತನ ಸ್ವಂತ ಊರಿನವರು, ಯೇಸುವಿಗೆ "**ಅಡಚಣೆ**" ಮಾಡಿದರು. ಅವರು ಆತನ ಉಪದೇಶವನ್ನು ಕೇಳಿ, "ಇವನಿಗೆ ಈ ಜ್ಞಾನವು ಈ ಮಹತ್ಕಾರ್ಯಗಳ ಬಲ ಎಲ್ಲಿಂದ ಬಂದಿದ್ದಾವು?" ಎಂದು ಪ್ರಶ್ನೆ ಕೇಳಿದರು (13:54). ಅನೇಕ ಮಂದಿ ಯೆಹೂದ್ಯರು ಶಿಲುಬೆ ಹಾಕಿದ ಮೆಸ್ಸೀಯನ ಕುರಿತ ವಾಸ್ತವವು ಅಂಗೀಕರಿಸದೆ ಹೋಗಿದ್ದರಿಂದ, ಶಿಲುಬೆ ಕುರಿತ ವಾರ್ತೆ ಅವರಿಗೆ "ವಿಘ್ನವೂ" ಆಗಿದೆ ಎಂದು ಪೌಲನು ಬರೆದಿದ್ದಾನೆ (1 ಕೊರಿಂಥ 1:23; ಗಲಾತ್ಯ 5:11).

## ಯೇಸು ಯೋಹಾನನನ್ನು ಪ್ರಶಂಸೆ ಮಾಡಿದ್ದು (11:7-15)

**7ಅವರು ಹೊರಟುಹೋಗುತ್ತಿರಲು ಯೇಸು ಯೋಹಾನನ ವಿಷಯವಾಗಿ ಆ ಜನರ ಗುಂಪುಗಳಿಗೆ ಹೇಳತೊಡಗಿದ್ದೇನಂದರೆ - ಏನು ನೋಡಬೇಕೆಂದು ಅಡವಿಗೆ ಹೋಗಿದ್ದಿರಿ?**

**ಗಾಳಿಯಿಂದ ಅಲ್ಲಾಡುವ ದಂಡನ್ನೋ? [8]ಅಲ್ಲವಾದರೆ ಏನು ನೋಡಬೇಕೆಂದು ಹೋಗಿದ್ದಿರಿ? ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನೋ? ನಯವಾದ ಉಡುಪನ್ನು ಉಟ್ಟುಕೊಂಡವರು ಅರಮನೆಗಳಲ್ಲಿ ಇರುತ್ತಾರಷ್ಟೆ. [9]ಹಾಗದರೆ ಯಾತಕ್ಕೆ ಹೋಗಿದ್ದಿರಿ? ಪ್ರವಾದಿಯನ್ನು ನೋಡುವದಕ್ಕೋ? ಹೌದು, ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿ ಎಂದು ನಿಮಗೆ ಹೇಳುತ್ತೇನೆ.**

**[10]ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ; ನೀನು ಹೋಗುವ ದಾರಿಯನ್ನು ಅವನು ನಿನ್ನ ಮುಂದೆ ಸರಿಮಾಡುವನು ಎಂದು ಯಾರ ವಿಷಯವಾಗಿ ಬರೆದದೆಯೋ ಆ ಪುರುಷನು ಇವನೇ. [11]ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. [12]ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈ ವರೆಗೂ ಪರಲೋಕರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನಮಾಡಿಕೊಳ್ಳುತ್ತಾರೆ. [13]ಪ್ರವಾದಿಗಳಲ್ಲೆರೂ ಧರ್ಮಶಾಸ್ತ್ರವೂ ಪ್ರವಾದಿಸುವದು ಯೋಹಾನನ ತನಕ ಇತ್ತು. [14]ನಿಮಗೆ ಗ್ರಹಿಸುವದಕ್ಕೆ ಮನಸಿದ್ದರೆ ಬರತಕ್ಕ ಎಲೀಯನು ಇವನೇ ಎಂದು ತಿಳುಕೊಳ್ಳಿರಿ. [15]ಕಿವಿಯುಳ್ಳವನು ಕೇಳಲಿ.**

**ವಚನ 7.** ಯೇಸುವಿನಿಂದ ಉತ್ತರವನ್ನು ಕೇಳಿದ ಯೋಹಾನನ ಸಂದೇಶವಾಹಕರು ಅಲ್ಲಿಂದ ಹೊರಟುಹೋದರು. ತರುವಾಯ ಯೇಸು ಜನರ ಕಡೆ ತಿರುಗಿಕೊಂಡು ಅವರಿಗೆ, **ಏನು ನೋಡಬೇಕೆಂದು ಅಡವಿಗೆ ಹೋಗಿದ್ದೀರಿ? ಗಾಳಿಯಿಂದ ಅಲ್ಲಾಡುವ ದಂಡನ್ನೋ?** ಎಂದು ಕೇಳಿದನು. ಯೆಹೂದ್ಯರು ಎಲ್ಲಾ ಸೀಮೆಗಳಿಂದ ಅನೇಕ ಮೈಲುಗಳು ಪ್ರಯಾಣಮಾಡಿ ಯೋಹಾನನ ಬೋಧನೆ ಕೇಳಲು ಮತ್ತು ಆತನಿಂದ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಹೋಗುತ್ತಿದ್ದರು (3:5, 6). ಸ್ಪಷ್ಟವಾಗಿ, ಯೋಹಾನನು ಪ್ರತಿಯೊಂದು ಗಾಳಿಯ ಪ್ರವಾಹಕ್ಕೆ ಅಲ್ಲಾಡುವ ದಂಟ ಅಲ್ಲ. ಅದರ ಬದಲಾಗಿ, ಯೋಹಾನನು ದೃಢನಿಶ್ಚಿಯ ಮತ್ತು ಧೈರ್ಯವಂತನಾಗಿದ್ದನು. ಆತನು ಫರಿಸಾಯರ ಮತ್ತು ಸದ್ದುಕಾಯರ ಕಪಟಾಚರಣೆಗಾಗಿ ಧೈರ್ಯವಾಗಿ ಗದರಿಸಿದನು (3:7-10). ಅದು ಮಾತ್ರವಲ್ಲದೆ, ಹೆರೋದ ಅಂತಿಪಸನ ಅನಧಿಕೃತವಾದ ಮದುವೆಯ ವಿಷಯದಲ್ಲಿ ಆತನನ್ನು ಎದುರಿಸಿದನು. ಆದ್ದರಿಂದ, ವಾಸ್ತವಿಕವಾಗಿ, ಯೋಹಾನನು ಸೆರಮನೆಯಲ್ಲಿ ಹಾಕಲಾಗಿತ್ತು (14:3-5).

**ವಚನ 8.** ತರುವಾಯ, ಜನರಿಗೆ **ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನು** ನೋಡಲು ಹೊಗಿದ್ದಿರೋ ಎಂದು ಯೇಸು ಕೇಳಿದನು. "ನಯವಾದ ಉಡುಪು" (*malakos*) ಇದನ್ನು ಬೇರೆ ಬೇರೆ ಭಾವಾರ್ಥದಲ್ಲಿ ಬರೆದಿದ್ದಾರೆ, "ಬೆಲೆಯುಳ್ಳ ವಸ್ತ್ರಗಳು" (NLT), "ಅಭಿರುಚಿಯ ಉಡುಪು" (TEV), ಮತ್ತು "ರೇಷ್ಮೆ ಮತ್ತು ಹೊಳಪಿರುವ ವಸ್ತ್ರ" (NEB). ಪುನಃ, ಪ್ರಶ್ನೆಗೆ ಸ್ಪಷ್ಟವಾದ ಉತ್ತರ "ಇಲ್ಲ" ಎಂಬುದು. ಅದರ ಬದಲಾಗಿ, ಯೋಹಾನನು "ಒಂಟೆ ಕೂದಲಿನಿಂದ ಮಾಡಿರುವ ಹೊದಿಕೆ ಮತ್ತು ಸೊಂಟದಲ್ಲಿ ತೊಗಲಿನ ನಡುಕಟ್ಟು" ಅವನು ಧರಿಸಿದ್ದನು (3:4). ಅವನ ವೇಷಭೂಷಣ ಪ್ರವಾದಿಯಂತೆ (2 ಅರಸುಗಳು 1:8; ಜೆಕರ್ಯ 13:4) ಮತ್ತು ಬಡವ ದರಿದ್ರನಂತೆ ಇದ್ದವು.[7]

ಯೇಸು ತರುವಾಯ, **ನಯವಾದ ಉಡುಪನ್ನು ಉಟ್ಟುಕೊಂಡವರು ಅರಮನೆಗಳಲ್ಲಿ ಇರುತ್ತಾರಷ್ಟೆ** ಎಂದು ಆತನು ಅವರಿಗೆ ಹೇಳಿದನು. ಅಂಥಹ ಜನರು ರಾಜರುಗಳನ್ನು ಮಾತ್ರ ಒಳಗೊಂಡಿರುತ್ತಾರೆ, ಅವರು ತಮ್ಮ ಸ್ವಾರ್ಥ ತೃಪ್ತಿಗಾಗಿ ಇರುವವರು, ಅವರು ರಾಜವೈಭವದಲ್ಲಿ ಇರುವವರು, ಅವರು ಮುಖಸ್ತುತಿ ಮತ್ತು ನೀತಿಯ ಸಂದಾನ ಸ್ವಭಾವದಿಂದ ಪರಿಚಿತರಾಗಿರುತ್ತಾರೆ. ಈ ಎಲ್ಲಾ ಗುಣಲಕ್ಷಣಗಳನ್ನು ಯೋಹಾನನು ಬಹಳವಾಗಿ

ವಿರೋಧಿಸಿದನು.

**ವಚನಗಳು 9, 10.** ಆತನ ಮೂರನೆಯ ಕ್ರಮದ ಪ್ರಶ್ನೆಗಳು ಯೇಸು ಕೇಳಿದನು, **ಹಾಗಾದರೆ ಯಾತಕ್ಕೆ ಹೋಗಿದ್ದೀರಿ? ಪ್ರವಾದಿಯನ್ನು ನೋಡುವದಕ್ಕೋ?** ಈ ವಿಷಯದಲ್ಲಿ ಉತ್ತರವು ನಿರ್ಧಿಷ್ಟವಾಗಿದೆ. ಯೋಹಾನನು ವಾಸ್ತವವಾಗಿ ಪ್ರವಾದಿಯಾಗಿದ್ದನು, ಆದರೆ ಆತನು ಅದಕ್ಕಿಂತಲು **ಹೆಚ್ಚಿನವನಾಗಿದ್ದನು.**

ಯೇಸು ಮಲಾಕಿ ಗ್ರಂಥದಿಂದ ತೆಗೆದುಕೊಂಡು ಹೇಳಿರುವ ಉಲ್ಲೇಖನವು ನಿರೂಪಿಸಿದಂತೆ (ಮಲಾಕಿ 3:1). ಯೋಹಾನನು ಮೆಸ್ಸೀಯನಿಗಾಗಿ ಮಾರ್ಗವು ಸಿದ್ಧಮಾಡಲು ಬರುವನೆಂದು ಪ್ರವಾದಿಸಿದವನಾಗಿದ್ದನು.[8] ಬರತಕ್ಕ ಎಲೀಯನು ಈತನೇ ಆಗಿದ್ದನು (ಮಲಾಕಿ 4:5; ಮತ್ತಾಯ 11:14).

**ವಚನ 11. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲವೆಂದು** ಯೇಸು ಹೇಳಿದನು. "ಸ್ತ್ರೀಯರಲ್ಲಿ ಹುಟ್ಟಿದವರು" ಎನ್ನುವದು ಇಬ್ರಿಯ ಭಾಷೆಯ ಸರಳವಾದ ಅರ್ಥ "ಮಾನವ ಜನಾಂಗ" ಎಂದು ತಿಳಿಸಲಾಗಿದೆ (ನೋಡಿರಿ ಯೋಬನು 14:1; 15:14; 25:4). ಆತನು, ತನ್ನ ಕಾರ್ಯದ ಮುಖಾಂತರ ಮೆಸ್ಸೀಯನು ಮುನ್‌ಸೂಚಕನಂತೆ ಕಾರ್ಯಮಾಡಿದನು ಜೀವಿಸಿದ್ದವರಲ್ಲಿ ಆತನು ಶ್ರೇಷ್ಠಪುರುಷನಾಗಿದ್ದನು (ನೋಡಿರಿ ಲೂಕ 1:15). ಸಹಜವಾಗಿ, ಯೇಸುವನ್ನು ಈ ಹೇಳಿಕೆಯಲ್ಲಿ ಬಿಡಲಾಗಿದೆ ಯಾಕೆಂದರೆ ಆತನೇ ಮೆಸ್ಸೀಯನಾಗಿದ್ದಾನೆ. ಆತನ ಜನನವು ಅದ್ಭುತವಾದ ಗರ್ಭದಾರಣೆಯಾಗಿದ್ದರೂ (ನೋಡಿರಿ 1:20ರ ಮೇಲಿನ ವ್ಯಾಖ್ಯಾನ), ಆತನು ಸಹ "ಸ್ತ್ರೀಯಲ್ಲಿ ಹುಟ್ಟಿದವನು" ಆಗಿದ್ದನು (ಗಲಾತ್ಯ 4:4).

**ಆದರೂ ಪರಲೋಕರಾಜ್ಯದಲ್ಲಿರುವ ಚಿಕ್ಕವನು[9] ಅವನಿಗಿಂತಲೂ ದೊಡ್ಡವನೆಂದು** ಹೇಳುತ್ತಾ ತನ್ನ ಮಾತನ್ನು ಮುಂದುವರಿಸಿದನು. ಆದರೂ ಯೋಹಾನನು ಪರಲೋಕ ರಾಜ್ಯವು ಹತ್ತಿರವಿದೆ ಎಂದು ಸಾರಿದನು, ಆತನು ಎಂದಿಗೂ ಆ ರಾಜ್ಯದ ಪ್ರಜೆಯಾಗಿರಲಿಲ್ಲ. ಪಂಚಶತ್ತಮ ದಿನದಂದು ಸ್ಥಾಪನೆಯಾಗುವ ಮೊದಲೆ ಆತನು ಸತ್ತನು. ಯೋಹಾನನು ಹೊಂದಿರುವ ಆಶೀರ್ವಾದ ಮತ್ತು ಅವಕಾಶಕ್ಕಿಂತಲೂ ಹೆಚ್ಚಾಗಿ ಕ್ರೈಸ್ತ ಯುಗದಲ್ಲಿರುವವರು ಪಡೆದುಕೊಂಡಿದ್ದಾರೆ.[10]

**ವಚನ 12. ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಇವರೆಗೂ ಪರಲೋಕ ರಾಜ್ಯವು ಬಲತ್ಕಾರಕ್ಕೆ ಗುರಿಯಾಗಿರುತ್ತದೆ; ಬಲತ್ಕಾರಿಗಳು ನುಗ್ಗಿ ಅದನ್ನು ಸ್ವಾದೀನ ಮಾಡಿಕೊಳ್ಳುತ್ತಾರೆ.** ಸ್ನಾನಿಕನಾದ ಯೋಹಾನನ ದೀನದಿಂದ ಇಲ್ಲಿಯವರೆಗೂ ರಾಜ್ಯವು ಹೇಗೆ ಅದು ಬಲತ್ಕಾರಕ್ಕೆ ಗುರಿಯಾಗುತ್ತದೆ? ದೇವರ ರಾಜ್ಯವು ಬಂದಿರದೆ ಇದ್ದರೂ, ಅದು ಇನ್ನೂ ಸಿದ್ಧತೆಯ ಹಂತದಲ್ಲಿದೆ. "ಸ್ನಾನಿಕನಾದ ಯೋಹಾನನ ದಿನಗಳು" ಎಂಬುದಾಗಿ ಹೇಳುವಾಗ ಅದು ಆತನು ಸಾರ್ವಜನಿಕ ಸೇವೆಯ ದಿನಗಳನ್ನು ಸೂಚಿಸುತ್ತದೆ. ಯೋಹಾನನ ಸಂದೇಶವು ವಿರೋಧಿಸಲ್ಪಟ್ಟಿತ್ತು ಮತ್ತು ಆತನ ಜೀವಿತವು ದುಷ್ಟ ಜನರ ಕೈಯಲ್ಲಿ ಹಿಂಸಾತ್ಮಕ ರೂಪದಲ್ಲಿ ಅತಿ ಬೇಗನೆ ಕೊನೆಗಾಣುವಂಥದ್ದಾಗಿತ್ತು (14:3-12). ಯೇಸು ತನ್ನ ಅಪೊಸ್ತಲರಿಗೆ ಅವರ ಸಂದೇಶಕ್ಕೆ ಹಿಂಸಾತ್ಮಕ ಪ್ರತಿಕ್ರಿಯೆಗಳು ಬರುತ್ತವೆಂದು ಎಚ್ಚರಿಕೆ ನೀಡಿದ್ದನು (10:16-20). ಆತನ ಸ್ವಂತ ಸೇವೆಯಲ್ಲಿಯೂ ಕೂಡ ಹಿಂಸೆಯ ವಿರೋಧವಿತ್ತು ಮತ್ತು ಆತನ ಮರಣದೊಂದಿಗೆ ಕೊನೆಗೊಂಡಿತು (26:55-57, 65-68; 27:26, 30, 33-35, 50).

ಈ ವಾಕ್ಯದ ಭಾಗಗಳನ್ನು ವಿವರಿಸುವದು ಕಷ್ಟಕರವಾಗಿದೆ. "ಬಲತ್ಕಾರವಾದ ಹಿಂಸೆಗೆ" (from *biazā*) ಸಂಬಂಧಿಸಿದ ಗ್ರೀಕ್ ಪದರೂಪವು ಕರ್ಮಣಿ ಕ್ರಿಯಾರೂಪ ಅಥವಾ ಮಧ್ಯಮ ಪ್ರಯೋಗ ಪದವನ್ನಾಗಿಯೂ ಸಹ ಅನುವಾದಿಸಬಹುದಾಗಿದೆ. ಇದನ್ನು ಕರ್ಮಣಿ ಕ್ರಿಯಾರೂಪವನ್ನಾಗಿ ಪರಿಗಣಿಸುವದಾದರೆ ("ಬಲತ್ಕಾರವಾಗಿ

ಹಿಂಸಿಸಲ್ಪಡುವದು"), ಯೋಹಾನ ಮತ್ತು ಯೇಸುವಿನ ವಿಷಯದಲ್ಲಿ ಜನರು ವಿರೋಧಿಸಿದಂತೆ ಹಿಂಸೆಯನ್ನು ರಾಜ್ಯದ ವಿರುದ್ಧವಾಗಿ ಹೊರಗಡೆಯಿಂದ ತೆಗೆದುಕೊಂಡು ಬರುವಂಥದ್ದು ಎಂದು ಅರ್ಥವಾಗುತ್ತದೆ. ಇದು ಸಹ ಇದೆ. ಇದನ್ನು ಮಧ್ಯಮ ಪ್ರಯೋಗ ಎಂಬುದಾಗಿ ಪರಿಗಣಿಸಿದರೆ ("ಬಲತ್ಕಾರವಾಗಿ ಬರುತ್ತಾ ಇದೆ") ರಾಜ್ಯವು ಪರಿಚಯವಾಗಿದ್ದರೂ ಸಹ, ಜನರು ತಮ್ಮ ಬಲ ಉಪಯೋಗಿಸಿ ಒತ್ತಾಯ ಪೂರ್ವಕವಾಗಿ ತಮ್ಮ ಮಾರ್ಗಗಗಳನ್ನು ಸೇರಿ ಸುತ್ತಿದ್ದಾರೆ ಎಂದರ್ಥವಾಗಿದೆ.

ಇಲ್ಲಿ ಎರಡನೆಯ ದೃಶ್ಯಾವಳಿ ವರ್ಣಿಸಿರುವದು ರಾಜ್ಯವು "ಪಟ್ಟಣವು ಸ್ವಾದೀನದಲ್ಲಿ" ಇದೆ ಅದು ಪುರುಷರಿಂದ ಅದರ ಗೋಡೆಗಳನ್ನು ಆಕ್ರಮಿಸಿ ಪ್ರವೇಶಕ್ಕೆ ಬಲತ್ಕಾರ ಮಾಡುವರು. ರಾಜ್ಯವು, ಅದನ್ನು ತಪ್ಪಾಗಿ ಗ್ರಹಿಸಿಕೊಂಡರೂ, ಬಹಳ ಕುತುಹಲದಿಂದ ರಾಜ್ಯಕ್ಕೆ ಶುಭವನ್ನು ಕೋರಿದ್ದಾರೆ. ಕೆಲವರು ಅದರ ವಿಷಯವನ್ನು ಹೊರಗೆ ತೆಗೆಯುವದಕ್ಕೆ ಅವಸರ ಮಾಡಿ ಪ್ರಯತ್ನಿಸುವರು; ಇನ್ನು ಕೆಲವರು ಅದರಲ್ಲಿ ಪ್ರಧಾನತೆಯ ಕಡೆಗೆ ನಡೆಯುತ್ತಾರೆ (20:21; ಲೂಕ 16:16; 19:11; 22:24-30; ಯೋಹಾನ 6:15; ಅಪೊಸ್ತಲರ ಕೃತ್ಯಗಳು 1:6). ಇದರ ಮೊದಲ ವಿವರಣೆಯು ನಕರಾತ್ಮಕವಾಗಿದೆ, ಮತ್ತು ಎರಡನೆಯದು ಸಕರಾತ್ಮಕವಾಗಿದೆ. ಪರಲೋಕ ರಾಜ್ಯಕ್ಕೆ ಹಿಂಸೆ ಬರುತ್ತದೆ ಎಂದು ಹೇಳುವ ಅರ್ಥ ಇದಾಗಿದೆ.

**ವಚನ 13.** ಈ ಸಂದರ್ಭದಲ್ಲಿ, **ಯೋಹಾನನು** ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿ ಬದಲಾವಣೆಗೆ ಪಾತ್ರವಹಿಸಿದನು ಎಂದು ಯೇಸು ಒತ್ತಿ ಹೇಳಿದ್ದಾನೆ. ಸಾಮಾನ್ಯವಾಗಿ ಇರುವ **ಪ್ರವಾದಿಗಳಲ್ಲೆರೂ ಧರ್ಮಶಾಸ್ತ್ರವೂ** ಎನ್ನುವ ಭಾಗವನ್ನು ಆತನು ತದ್ವಿರುದ್ಧವಾದ ಕ್ರಮವಾಗಿ ಉಪಯೋಗಿಸಿ "ಧರ್ಮಶಾಸ್ತ್ರ ಮತ್ತು ಎಲ್ಲಾ ಪ್ರವಾದಿಗಳು" ಎಂದು ಉಪಯೋಗಿಸಿದ್ದಾನೆ (ನೋಡಿರಿ 5:17; 7:12; 22:40). ಯೋಹಾನನು ಪ್ರವಾದನೆಯನ್ನು ನೆರವೇರಿಸುವಾತನು ಎನ್ನುವ ಸತ್ಯಸಂಗತಿಯು ಅದು ಬಹಳ ಮುಖ್ಯವಾದದ್ದಾಗಿದೆ. ಪ್ರವಾದಿಗಳ ಶಬ್ದವು ಸುಮಾರು ನಾಲ್ಕು ನೂರು ವರ್ಷಗಳ ಕಾಲ ನಿಶ್ಯಬ್ಧವಾಗಿತ್ತು, ಮಲಾಕಿಯನು ಹಳೆ ಒಡಂಬಡಿಕೆ ಕೊನೆಯ ಪ್ರವಾದಿಯಾದ ಯೋಹಾನನ ಬರುವಿಕೆ ಕುರಿತು ಭವಿಷ್ಯ ನುಡಿದಿದ್ದನು (11:9, 10ರ ಮೇಲಿನ ವ್ಯಾಖ್ಯಾನ ನೋಡಿರಿ). ಪ್ರವಾದಿಗಳ ಎಲ್ಲಾ ಘಟನೆಗಳನ್ನು ಒಂದು ಗೂಡಿಸಿ ನೋಡುವಾಗ ಯೋಹಾನನ ಬರುವಿಕೆಯನ್ನು ತೋರಿಸುತ್ತದೆ. "ಕರ್ತನ ದಾರಿಯನ್ನು ಸಿದ್ಧಮಾಡಿರಿ; ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ದವಿದೆ" ಎಂದು ಹೇಳುತ್ತಾ ಇದ್ದನು (3:3; ನೋಡಿರಿ ಯೆಶಾಯ 40:3). ಯೋಹಾನನು ಮತ್ತು ಆತನ ಹಿಂದೆ ಬಂದವನ ಕುರಿತಾಗಿ ಎಲ್ಲಾ ಪ್ರವಾದನೆಗಳು ನೆರವೇರಿವೆ. ಧರ್ಮಶಾಸ್ತ್ರ ಮತ್ತು ಪ್ರವಾದಿಗಳು ಸಹ ರಾಜ್ಯವನ್ನು ಬರುವದರ ಕುರಿತು ಪ್ರವಾದನೆ ಹೇಳುತ್ತವೆ (ದಾನಿಯೇಲ 2:44), ಯೋಹಾನನು ಮತ್ತು ಯೇಸು "ಹತ್ತಿರವಾಯಿತು" ಎಂದು ಸಾರಿದರು (3:2; 4:17).

**ವಚನ 14.** ಯೇಸು ಯೋಹಾನನ್ನು **ಬರತಕ್ಕ ಎಲೀಯನು ಇವನೇ** ಎಂದು ಗುರುತಿಸಿದನು. ಇದು ಮಲಾಕಿಯ 4:5ರ ನೆರವೇರಿಕೆಯಾಗಿತ್ತು: "ಯೊಹೋವನ ಆಗಮನದ ಭಯಂಕರವಾದ ಮಹಾದಿನವು ಬರುವದಕ್ಕೆ ಮುಂಚೆಯೇ ಪ್ರವಾದಿಯಾದ ಎಲೀಯನನ್ನು ನಿಮ್ಮ ಬಳಿಗೆ ಕಳುಹಿಸುವೆನು." ಈ ಪ್ರವಾದನೆಯ ಆಧಾರದ ಮೇಲೆ ಪ್ರವಾದಿಯಾದ ಎಲೀಯನು ದೈಹೀಕ ಮರಣ ಹೊಂದಲಿಲ್ಲ (2 ಅರಸುಗಳು 2:11, 12) ಎಂಬ ಈ ಅಂಶದ ಆಧಾರದ ಮೇಲೆ ಗುರುತಿಸಿದ್ದಾನೆ. ಯೆಹೂದ್ಯರು ಎಲೀಯನು ಈ ಭೂಲೋಕಕ್ಕೆ ಅಕ್ಷರಶಃ ಹಿಂತಿರುಗಿ ಬರುವನೆಂದು ಬಲವಾದ ನಿರೀಕ್ಷೆ ಹೊಂದಿದ್ದರು.[11] ಯೋಹಾನನು ಎಲೀಯನೆಂದು ಅಕ್ಷರಾರ್ಥವಾಗಿ ನಿರಾಕರಿಸಿದನು (ಯೋಹಾನ 1:21), ಆದರೆ ಯೇಸು ಆತನನ್ನು "ಎಲೀಯ" ನೆಂದು ಈತನ ಕುರಿತು ಮಲಾಕಿಯನು ಪ್ರವಾದಿಸಿದನೆಂದು ಗುರುತಿಸಿದ್ದಾನೆ (ನೋಡಿರಿ 17:10-13; ಮಾರ್ಕ 9:11-13). "ಯೋಹಾನನು ನಿಜವಾಗಿ ಎಲೀಯನ ಆತ್ಮ

ಮತ್ತು ಬಲದಲ್ಲಿ ನಿಶ್ಚಯವಾಗಿ ಬಂದಿದ್ದನು" (ಲೂಕ 1:17).

ಯೋಹಾನನು "ಎಲೀಯನೆಂದು" **ಗ್ರಹಿಸುವದಕ್ಕೆ** ಪ್ರತಿಯೊಬ್ಬರಿಗೆ **ಮನಸಿಲ್ಲವೆಂದು** ಯೇಸು ಗುರುತಿಸಿದನು. ಎಲೀಯನು ಹಿಂತಿರುಗಿ ಬರುವನು ಎನ್ನುವ ಪೂರ್ವ ನಿರೀಕ್ಷೆಯ ಅವರ ಅಭಿಪ್ರಾಯ ಅಕ್ಷರಾರ್ಥವಾಗಿತ್ತು. ಯೋಹಾನನು ಸೆರೆಯಲ್ಲಿದ್ದ ವಾಸ್ತವದಿಂದಾಗಿ, ಅವರು ಇದನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಗುರುತನ್ನು ಸ್ವೀಕರಿಸಲು ಈ ಎಲ್ಲಾ ವಿಷಯಗಳು ಅವರಿಗೆ ಅಡಚಣೆಯಾದವು (ನೋಡಿರಿ 11:6 ಮೇಲಿನ ವ್ಯಾಖ್ಯಾನ).

**ವಚನ 15.** ಯೇಸು ತನ್ನ ಕೇಳುಗರು ಕೇಳಬೇಕೆಂದು ಈ ಎಚ್ಚರಿಕೆಯೊಂದಿಗೆ ಮುಕ್ತಾಯ ಮಾಡಿದನು: **ಕಿವಿಯುಳ್ಳವನು ಕೇಳಲಿ.** ಆತನ ಹೇಳಿಕೆ ಮತ್ತು ಇದಕ್ಕೆ ಸಮವಾಗಿರುವಂತ ಒಂದೇ ಅಂಶವಿರುವ ಸುವಾರ್ತೆಗಳಲ್ಲಿ ಮತ್ತು ಪ್ರಕಟಣೆಯಲ್ಲಿ ಕಂಡುಕೊಳ್ಳುತ್ತೇವೆ (13:9, 43; ಮಾರ್ಕ 4:9, 23; ಲೂಕ 8:8; 14:35; ಪ್ರಕಟಣೆ 2:7, 11, 17, 29; 3:6, 13, 22; 13:9). ಒಬ್ಬನು ಕಿವಿಯಿಂದ ಕೇಳಿಸಿ ಕೊಳ್ಳುವಂತ ಶಬ್ದಗಳನ್ನು ಮಾತ್ರ ಕೇಳಿಸಿಕೊಳ್ಳುವದು ಮಾತ್ರವಲ್ಲದೆ, ವಿಧೇಯತೆಯಿಂದ ನಂಬಿಕೆಯಿಂದ ತಮ್ಮ ಜೀವಿತವನ್ನು ಮಾರ್ಪಾಟು ಹೊಂದುವದಕ್ಕೆ ಅವಕಾಶ ಮಾಡಿಕೊಳ್ಳಬೇಕು.

## ಯೋಹಾನ ಮತ್ತು ಯೇಸುವಿಗೆ ಜನರ ಪ್ರತಿಕ್ರಿಯೆ (11:16-19)

**[16]ಆದರೆ ಈ ಸಂತತಿಯನ್ನು ಯಾರಿಗೆ ಹೋಲಿಸಲಿ? ಪೇಟೆಗಳಲ್ಲಿ ಕೂತುಕೊಂಡು ತಮ್ಮ ಗೆಳೆಯರಿಗೆ - ನಿಮಗೋಸ್ಕರ ಕೊಳಲೂದಿದೆವು, ನೀವು ಕುಣಿಯಲಿಲ್ಲ, ಗೋಳಾಡಿದೆವು. [17]ನೀವು ಎದೆಬಡಕೊಳ್ಳಲಿಲ್ಲ ಎಂದು ಕೂಗಿಹೇಳುವಂಥ ಹುಡುಗರನ್ನು ಹೋಲುತ್ತದೆ. [18]ಹೇಗೆಂದರೆ ಯೋಹಾನನು ಬಂದನು, ಅವನು ಅನ್ನಪಾನಗಳನ್ನು ತೆಗೆದುಕೊಳ್ಳದವನಾಗಿದ್ದನು; ಅವರು ಅವನಿಗೆ - ದೆವ್ವಹಿಡಿದದೆ ಅನ್ನುತ್ತಾರೆ. ಮನುಷ್ಯಕುಮಾರನು ಬಂದನು. [19]ಅವನು ಅನ್ನಪಾನಗಳನ್ನು ತೆಗೆದುಕೊಳ್ಳುವವನಾಗಿದ್ದಾನೆ; ಅವರು ಇಗೋ, ಇವನು ಹೊಟ್ಟೆಬಾಕನು, ಕುಡಕನು, ಭ್ರಷ್ಟರ ಮತ್ತು ಪಾಪಿಷ್ಠರ ಗೆಳೆಯನು ಅನ್ನುತ್ತಾರೆ. ಆದರೆ ಜ್ಞಾನವು ತನ್ನ ಕೆಲಸಗಳಿಂದ ಜ್ಞಾನವೇ ಎಂದು ಗೊತ್ತಾಗುವದು ಅಂದನು.**

**ವಚನ 16. ಆದರೆ ಈ ಸಂತತಿಯನ್ನು ಯಾರಿಗೆ ಹೋಲಿಸಲಿ?** ಎಂದು ಯೇಸು ಕೇಳಿದನು. "ಸಂತತಿ" (*genea*) ಎಂಬ ಪದವು ಒಂದು ನಿರ್ಧಿಷ್ಟ ಸಮಯದಲ್ಲಿ ಜೀವಿಸುವ ಜನರನ್ನು ಸೂಚಿಸುತ್ತದೆ. ಯೇಸು ಕೆಲವು ಸಾರಿ ತನ್ನ ಸಮಕಾಲಿನವರನ್ನು ಸೂಚಿಸಲು ವಿಶೇಷವಾಗಿ ಆತನನ್ನು ನಿರಾಕರಿಸಿದವರನ್ನು ಸೂಚಿಸಲು ಈ ಪದವನ್ನು ಉಪಯೋಗಿ ಸಿದನು (12:39, 41, 42, 45; 16:4; 17:17; 23:36; 24:34). ಈ ಸನ್ನಿವೇಶ ದಲ್ಲಿ, ತನ್ನ ದಿನಗಳಲ್ಲಿ ಇದ್ದ ಜನರನ್ನು ಆತನು **ಮಕ್ಕಳಿಗೆ** ಅವರು ನಂಬಿಕೆಯಲ್ಲಿ ಪಕ್ವತೆ ಇಲ್ಲದವರಾಗಿದ್ದವರಿಗೆ ಹೋಲಿಸಿದ್ದಾನೆ. ತಂದೆ ತಾಯಿಗಳು ಸಂತೆ ಮಾಡುವಾಗ ಅಥವಾ ಸ್ನೇಹಿತರನ್ನು ಭೇಟಿಯಾಗುವಾಗ, ಇನ್ನಿತರ ಕೆಲಸ ಕಾರ್ಯಗಳಲ್ಲಿ ಇರುವಾಗ **ಪೇಟೆಗಳಲ್ಲಿ** ಆಟ ಆಡುವ ಮಕ್ಕಳಂತೆ ಇದ್ದಾರೆ ಎಂದು ಹೇಳುತ್ತಾನೆ.

**ವಚನ 17.** ಮಕ್ಕಳು ಗುಂಪಾಗಿ ಆಟವಾಡುವಾಗ, ಮಕ್ಕಳು ತಮ್ಮ ಸ್ನೇಹಿತರನ್ನು ಕೂಗಿ ಇವರ ಜೊತೆ ಆಟ ಆಡಲು ಸಹಕರಿಸದೆ ಇದ್ದದಕ್ಕಾಗಿ ಅವರನ್ನು ಟೀಕಿಸುವ ದೃಶ್ಯ ಯೇಸು ವರ್ಣಿಸುತ್ತಿದ್ದಾನೆ. ಅಲ್ಲಿ, ಸಂತೋಷದ ಮದುವೆ ಉತ್ಸವದಲ್ಲಿ **ಕೊಳಲೂದಿದಾಗ** ಸಹಕರಿಸದ ಸ್ನೇಹಿತರು ಸೇರುವದಿಲ್ಲ ಮತ್ತು **ಕುಣಿಯಲಿಲ್ಲ.** ಅವರು ಆಟಗಳನ್ನು ನಿಲ್ಲಿಸಿ ಸಮಾಧಿಗೆ ಹೋಗುವಾಗ **ಎದೆಬಡಿಕೊಳ್ಳಲು** ಪ್ರಾರಂಭಿಸುತ್ತಾರೆ. ಇಂಥಹ ಸ್ನೇಹಿತರು ಇನ್ನೂ ಅವರು ಭಾಗವಹಿಸುವದಿಲ್ಲ, ಅವರು **ಗೋಳಾಡಲಿಲ್ಲ.** ಕೆಲವೊಬ್ಬರು ಮರಣಹೊಂದಿದಾಗ

ಅಳುವಂತಹ ಉದ್ಯೋಗಸ್ಥ ಹೆಂಗಸರನ್ನು ಬಾಡಿಗೆ ತರುತ್ತಿದ್ದರು (9:23ರ ಮೇಲಿನ ವ್ಯಾಖ್ಯಾನ ನೋಡಿರಿ). ಮುಂದೆ, ಸಮಾಧಿಗೆ ಹೋಗುವಾಗ ಹಾದು ಹೋಗುತ್ತಿರುವ ಜನರು ಸಮಾಧಿ ದುಃಖದಲ್ಲಿ ಭಾಗವಹಿಸುವರೆಂದು ನಿರೀಕ್ಷಿಸಿದ್ದರು.[12]

ಯೆಹೂದ್ಯರ ದಿನನಿತ್ಯ ಕಾರ್ಯದಲ್ಲಿ ತೆಗೆದುಕೊಂಡು ಹೇಳಿರುವ ಸಾಮಾನ್ಯವಾದ ವಿವರಣೆಯು ಯೇಸು ಮತ್ತು ಯೋಹಾನನ್ನು ಅಂಗಿಕರಿಸಿಕೊಂಡಿರುವ ವಿಧಾನ ವರ್ಣಿಸಲು ಉಪಯೋಗಿಸಲಾಗಿದೆ. ಇವರು ದೇವರಿಂದ ಕಳುಹಿಸಲ್ಪಟ್ಟ ಸಂದೇಶಕರು ಎಂದು ಯೆಹೂದ್ಯರು ಸಹಕರಿಸಲಿಲ್ಲ.

**ವಚನ 18. ಯೋಹಾನನು** ಯಾರಿಗಾಗಿ ಬಂದಿರುವನೋ ಆ ಯೆಹೂದ್ಯ ಸಂತತಿಗೆ ಆತ್ಮೀಕ ಗ್ರಹಿಸುವಿಕೆಯಿರಲಿಲ್ಲ. ಯೆಹೂದ್ಯರು ಯೋಹಾನನ ಕಠೋರತೆ ಮತ್ತು ವಿಲಕ್ಷಣತೆಯ ಜೀವನಕ್ಕಾಗಿ ಆತನನ್ನು ನಿರಾಕರಿಸಿದರು. ಯೋಹಾನನು **ಅನ್ನಪಾನಗಳನ್ನು ತೆಗೆದುಕೊಳ್ಳದವನಾಗಿದ್ದನು,** ಆತನು ದ್ರಾಕ್ಷಾರಸವನ್ನು ಕುಡಿಯಲಿಲ್ಲ (ಲೂಕ 1:15) ಮತ್ತು ಆತನ ಮಿತವಾದ ಆಹಾರ "ಮಿಡತೆ ಮತ್ತು ಕಾಡು ಜೇನು" ಆಗಿತ್ತೆಂದು ವಾಸ್ತವವನ್ನು ಸೂಚಿಸುತ್ತದೆ (3:4). ಆತನು ಸಹ ತನ್ನ ಶಿಷ್ಯರಿಗೆ ಉಪವಾಸ ಮಾಡಲು ಅಪ್ಪಣೆ ಮಾಡಿದನು (9:14). ಆ ಸಂತತಿ ಆತನ ಸಂದೇಶವನ್ನು ನಿಷ್ಠುರತೆಯಿಂದ ಮತ್ತು ಗಂಭೀರವಾಗಿ ನಿರಾಕರಿಸಿದರು. ಅವರು ತಮ್ಮ ಕ್ರಿಯೆಗಳಲ್ಲಿ ಉದಾಹಸಿನತೆಯಿಂದಿರಲು ಅವಕಾಶಕೊಡಲಿಲ್ಲ, ಆದರೆ ಆತನು ಅವರು ಪಶ್ಚಾತ್ತಾಪ ಹೊಂದಿ ದೀಕ್ಷಾಸ್ನಾನ ಹೊಂದುವದಕ್ಕಾಗಿ ಕರೆದನು (3:2, 6; ಮಾರ್ಕ 1:4). ಅದರ ಫಲಿತವಾಗಿ, ಅವರು ಆತನಿಗೆ **ದೆವ್ವ** ಹಿಡಿದವನು ಎಂದು ಆರೋಪಿಸಿದರು.[13]

ಯೇಸು ತನ್ನ ಸಂತತಿಯ ಕುರಿತು ಮಾತಾಡುವಾಗ, ಆತನು ಧಾರ್ಮಿಕ ನಾಯಕರ ಕುರಿತು ತನ್ನ ಮನಸ್ಸಿನಲ್ಲಿ ಕಂಡುಬಂದವರಂತೆ ಕಾಣಿಸುತ್ತದೆ. ಲೂಕನು ಬರೆದ ಸುವಾರ್ತೆಯಲ್ಲಿ ಬರೆದಿರುವ ಸಮಾನಾಂತರ ವಿವರಣೆಯಲ್ಲಿ ಯೋಹಾನನು ದೀಕ್ಷಾಸ್ನಾನ ಹೊಂದಿದ ಸಾಮಾನ್ಯ ಪ್ರಜೆಗಳಿಗೆ (ಸುಂಕದವನು ಸೇರಿಕೊಂಡು) ದೀಕ್ಷಾಸ್ನಾನ ಹೊಂದಲು ನಿರಾಕರಿಸಿ, ಅದರ ಮುಖಾಂತರ ಅವರ ಜೀವಿತದಲ್ಲಿ ಅಂಥಹಾ ದೇವರ ಚಿತ್ತವನ್ನು ನಿರಾ ಕರಿಸಿ ಫರಿಸಾಯರು ಮತ್ತು ನ್ಯಾಯಾಧಿಪತಿಗಳು ಮಧ್ಯ ಅಂಥಹಾ ತಾರತಮ್ಯವನ್ನು ಮುಟ್ಟಿ ಒಂದು ವ್ಯಾಖ್ಯಾನ ಒಳಗೊಂಡಿದೆ (ಲೂಕ 7:29, 30; ನೋಡಿರಿ ಮತ್ತಾಯ 21:32).

**ವಚನ 19.** ಆ ಸಂತತಿಯು ಸಹ ಯೇಸುವನ್ನು ಆತನು **ಮನುಷ್ಯಕುಮಾರನು** ಎಂದು ಗುರುತಿಸಲ್ಪಟ್ಟಿದವನನ್ನು ನಿರಾಕರಿಸಿದರು, ಆತನಿಗೆ **ಹೊಟ್ಟೆಬಾಕನು, ಕುಡಕನು,** ಎಂದು ಆರೋಪಿಸಿದರು (ನೋಡಿರಿ ಧರ್ಮೋಪದೇಶಕಾಂಡ 21:20).[14] ಈ ಸುಳ್ಳು ಆರೋಪ ಗಳು ವಾಸ್ತವ ಅಂಶಕ್ಕೆ ತಪ್ಪಾಗಿ ಬಿಂಬಿಸಿದಂತೆ ಆಗಿದೆ. ಯೇಸು ತನ್ನ ಶಿಷ್ಯರಿಗೆ ಯೆಹೂದ್ಯರ ಸಂಪ್ರದಾಯದ ಉಪವಾಸದಲ್ಲಿ ಪಾಲುಗಾರರಾಗಬೇಡಿರಿ ಎಂದು ಆಜ್ಞೆ ಮಾಡಲಿಲ್ಲ (9:14), ಮತ್ತು ಆತನು ಅನೇಕ ಸತ್ಕಾರ ಭೋಜನಕ್ಕೆ ಜನರ ಮನೆಗಳಲ್ಲಿ ಆಹ್ವಾನಿಸಲ್ಪಟ್ಟನು (9:9, 10; 26:6, 7; ಲೂಕ 7:36; 10:38; 14:1; 19:5) ಮತ್ತು ಮದುವೆಯಂತಹ ಅನೇಕ ಆಚರಣೆಗಳಿಗೆ ಆಹ್ವಾನಿಸಲ್ಪಟ್ಟನು (ಯೋಹಾನ 2:1-11). ಯೋಹಾನನಿಗೆ ಸರಳ ಗುಣ ನಡತೆಯಿದ್ದದರಿಂದ ಜನರ ಟೀಕೆಗೆ ಒಳಗಾದನು, ಯೇಸು ಜೀವನದ ಸಾಮಾನ್ಯ ಕಾರ್ಯ ಚಟುವಟಿಕೆಯಲ್ಲಿ ಭಾಗವಹಿಸಿದ್ದಕ್ಕಾಗಿ ಟೀಕಿಸಲ್ಪಟ್ಟನು.

ಯೇಸು ತನ್ನ ಸೇವೆ ಮುಂದುವರಿಸಿದಂತೆ ಆತನು ಆ ಜನರೊಂದಿಗೆ ಸಹವಾಸದಲ್ಲಿ ಇದ್ದನು ಆತನನ್ನು ಅಪಹಾಸ್ಯ ಮಾಡಿದರು, **ಭ್ರಷ್ಟರ ಮತ್ತು ಪಾಪಿಷ್ಠರ ಗೆಳೆಯನೆಂದು** ಹೆಸರಿಟ್ಟರು (9:11ರ ಮೇಲಿನ ವ್ಯಾಖ್ಯಾನ ನೋಡಿರಿ). ಸಹಜವಾಗಿ, ಯೇಸು ಅವರನ್ನು ಪುನಃ ದೇವರೊಂದಿಗೆ ಸಂಬಂಧ ಸ್ಥಾಪಿಸಲು ಅವರೊಂದಿಗೆ ಸಹವಾಸದಲ್ಲಿದ್ದನು, ಆದರೆ ಪಾಪ ಕೃತ್ಯಗಳಲ್ಲಿ ಭಾಗ ಹೊಂದುವದಕ್ಕಾಗಿ ಅಲ್ಲ. ಇದನ್ನು Lewis ರವರು ಹೀಗೆ

ಹೇಳುತ್ತಾ ವ್ಯಕ್ತಪಡಿಸುತ್ತಿದ್ದಾನೆ, "ಇತರರು ಧಾರ್ಮಿಕ ಶ್ರದ್ಧೆಯುಳ್ಳವರು - ಬೇರ್ಪಟ್ಟವರಾಗಿ (ಫರಿಸಾಯರು) ಗುಂಪುಗಳನ್ನು ಮಾಡಿಕೊಂಡರು, ಅಥವಾ ಬೆಳಕಿನ ಮಕ್ಕಳು (ಪ್ರಾಚೀನ ಯೆಹೂದ್ಯ ತಂಡವರು), ಪವಿತ್ರವಾಗಿ ಉಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು - ಯೇಸು ಜನರ ಗುಂಪುಗಳಿಗೆ ಹೋಗಿ ನಾಶವಾಗುವವರ ಮಧ್ಯದಲ್ಲಿ ಕಾರ್ಯಮಾಡಿದನು."[15]

**ಜ್ಞಾನವು ತನ್ನ ಕೆಲಸಗಳಿಂದ ಜ್ಞಾನವೇ ಎಂದು ಗೊತ್ತಾಗುವದು** ಎಂದು ಹೇಳಿ ಯೇಸು ಮುಕ್ತಾಯಗೊಳಿಸಿದನು. ಹಳೆ ಒಡಂಬಡಿಕೆಯಲ್ಲಿದ್ದಂತೆಯೇ, "ಜ್ಞಾನ"ವನ್ನು (*ophia*) ಒಬ್ಬ ಮಹಿಳೆ ಎಂಬಂತೆ ಸೂಚಿಸಿ ವರ್ಣಿಸಲಾಗಿದೆ (ನೋಡಿರಿ ಜ್ಞಾನೋಕ್ತಿ 8; 9). "ಆಕೆಯ ಕಾರ್ಯಗಳು" ಎಂಬುದಕ್ಕೆ ಬದಲಾಗಿ ಲೂಕನು "ಆಕೆಯ ಮಕ್ಕಳು" ಎಂದು ಬರೆದಿದ್ದಾನೆ (ಲೂಕ 7:35). ಏನೇ ಆದರೂ, ಅಂಶವು ಒಂದೇ ಆಗಿದೆ. ಅವರ ಕುರಿತಾಗಿ ಜನರು ಏನೇ ಹೇಳಿದರೂ ಅದನ್ನು ಅಲಕ್ಷಿಸಿ, ಜನರನ್ನು ಪಶ್ಚಾತ್ತಾಪಕ್ಕಾಗಿ ಕರೆಯುವದು ಮತ್ತು ಬರುವ ರಾಜ್ಯಕ್ಕಾಗಿ ಸಿದ್ಧಪಡಿಸುವ ದೇವರ ಯೋಜನೆಯ ಕಾರ್ಯವನ್ನು ಯೇಸು ಮತ್ತು ಯೋಹಾನರು ನೆರವೇರಿಸಿದರು. ಪರಿವರ್ತನೆ ಹೊಂದಿದವರು - ಯಾರ ಜೀವಿತ ಸಂಪೂರ್ಣವಾಗಿ ಬದಲಾಗಿದೆಯೋ - ಅವರು ತಮ್ಮ ಕಾರ್ಯಗಳನ್ನು ಸಮರ್ಥನೆ ಮಾಡಿಕೊಂಡರು. ಫರಿಸಾಯರು ಮತ್ತು ಇತರ ಟೀಕಾಕಾರರು ದೇವರ ಜ್ಞಾನವನ್ನು ಅಂಗಿಕರಿಸದೆ ಇರಬಹುದು, ಆತ್ಮೀಕವಾದ ಜ್ಞಾನದಿಂದ ದೇವರ ರಾಜ್ಯದ ಕುರಿತ ಬೋಧನೆಯು ಮುಚ್ಚುವರೆಯಿಲ್ಲದೆ ಮಾಡಬೇಕು. ಲೂಕನು ಬರೆದ ಸುವಾರ್ತೆಯಲ್ಲಿ ತಿಳಿಸಿದಂತೆ ಜ್ಞಾನ ಹೊಂದ "ಮಕ್ಕಳು" ಸಹಕರಿಸಿದೆ ಸಂತೆಯಲ್ಲಿರುವ "ಮಕ್ಕಳಿಗೆ" ಬಹಳ ಭಿನ್ನವಾಗಿ ನಿಲ್ಲುವರು (ಲೂಕ 7:32, 35).

## ಪಾಠಗಳು

## ಕ್ರಿಸ್ತನು ತನ್ನ ಉಪದೇಶವನ್ನು ಮುಂದುವರಿಸಿದನು (ಅಧ್ಯಾಯ 11)

ಮತ್ತಾಯ 11ರಲ್ಲಿ ಆರು ಸತ್ಯಗಳನ್ನು ಕಂಡುಕೊಳ್ಳಲಾಗಿದೆ: (1) ಶ್ರೇಷ್ಠತೆಯ ಬಗ್ಗೆ ನಮ್ಮ ಅಳತೆಗೂ ದೇವರ ಅಳತೆಯ ಪದ್ಧತಿಗೂ ಬಹಳಷ್ಟು ವ್ಯತ್ಯಾಸವಿದೆ (11:1-6). (2) ಕಣ್ಣಿಗೆ ಕಾಣಿಸುವಂಥವುಗಳು ಕೆಲವು ಸಾರಿ ಮೋಸಕರವಾಗಿರುತ್ತವೆ (11:7-10). (3) ದೇವರಿಗಾಗಿ ನಾವು ಮಾಡಿರುವದರ ಕುರಿತು ಎಂದಿಗೂ ಅಲ್ಪವಾಗಿ ಯೋಚಿಸಲೆ ಕೂಡದು (11:11-15). (4) ಹೆಚ್ಚಿನ ಜನರಿಗೆ ನಿಜವಾದ ಧರ್ಮ ಬೇಕಾಗಿರುವದಿಲ್ಲ (11:16-19). (5) ಕ್ರಿಸ್ತನು ನಮಗೆ ನ್ಯಾಯ ತೀರಿಸುತ್ತಾನೆ (11:20-24). (6) ಆತನಲ್ಲಿಗೆ ಬರುವವರಿಗೆ ಕ್ರಿಸ್ತನು ಅವರನ್ನು ಕರುಣಿಸುವದಕ್ಕಾಗಿ ಮತ್ತು ಅವರನ್ನು ಕ್ಷಮಿಸುವದಕ್ಕಾಗಿ ಕುತುಹಲವುಳ್ಳವನಾಗಿದ್ದಾನೆ (11:25-30).

## ಸ್ನಾನಿಕನಾದ ಯೋಹಾನ (11:2-6)

ಯೋಹಾನನು ಒಂಟೆ ಕೂದಲಿನ ಹೊದಿಕೆ ಧರಿಸಿರುವ ಬೋಧಕನಾಗಿದ್ದನು (3:4). ಸ್ನಾನಿಕನಾದ ಯೋಹಾನನ್ನು ನಾವು ಅರ್ಥಮಾಡಿಕೊಳ್ಳಲು, ಆತನ ಹಿನ್ನಲೆಯನ್ನು ನಾವು ತಿಳಿದುಕೊಳ್ಳಲೇಬೇಕು. ಆತನು ಹುಟ್ಟುವದಕ್ಕಿಂತ ಮುಂಚೆ ವಿಶೇಷತೆಯುಳ್ಳವನಾಗಿದ್ದನು (ಲೂಕ 1:1-25, 41, 57-66). ಆತನು ಕೇವಲ ಕುತೂಹಲವುಳ್ಳ ವ್ಯಕ್ತಿಯಾಗಿರದೆ; ಆತನ ಗುಣಲಕ್ಷಣಗಳು ನಮಗೆ ಹೆಚ್ಚುಕಡಿಮೆ ಯೋಚಿಸುವಂತೆ ಮಾಡುತ್ತವೆ. ಆತನ ಗುಣಲಕ್ಷಣಗಳು ಹಳೆ ಒಡಂಬಡಿಕೆಯ ಪ್ರವಾದಿಗಳಂತೆ ವಿಲಕ್ಷಣವಾಗಿ ವಾಸ್ತವವಾಗಿ ಇದ್ದವೆಂದು ತಿಳಿಯುತ್ತದೆ (ಯೆಶಾಯ 40:3-5; ಮಲಾಕಿ 3:1; 4:5, 6). ಆತನ ಉದ್ಯೋಗದ ವರ್ಗ ಎರಡನೆಯ ಸ್ಥಾನವಾಗಿತ್ತು, ಪ್ರಥಮ ಸ್ಥಾನವಾಗಿರಲಿಲ್ಲ - ಮದುವೆ ವರನ ಸ್ನೇಹಿತನದ್ದಾಗಿತ್ತು, ಆದರೆ

ಮದುವೆಯ ವರನಾಗಿರಲಿಲ್ಲ (3:11; ಯೋಹಾನ 3:29, 30). ಆತನು ಕ್ರಿಸ್ತನು ಆಗಿರಲಿಲ್ಲ (ಲೂಕ 3:15-17); ಮೆಸ್ಸೀಯನಿಗಾಗಿ ದಾರಿಯನ್ನು ಸಿದ್ಧಮಾಡುವದು ಆತನ ಸೇವಾ ಕಾರ್ಯವಾಗಿತ್ತು, ಜನರ ಹೃದಯವನ್ನು ಮೆಸ್ಸೀಯನಿಗಾಗಿ ಸಿದ್ಧಮಾಡುವದು, ಆತನು ಬೆಳಕಿನ ಕುರಿತು ಸಾಕ್ಷಿ ಹೇಳುವವನಾಗಿದ್ದನು (ಯೋಹಾನ 1:1-18, 29-34). ಆತನ ಸಂದೇಶ ಸರಳವಾಗಿತ್ತು: "ಪರಲೋಕ ರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ" ಎಂಬುವುದೇ ಆಗಿತ್ತು (3:2). "ಪಾಪ ಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ ಎಂದು ಬೋಧಿಸುತ್ತಿದ್ದನು" (ಮಾರ್ಕ 1:4) ಮತ್ತು ಯೇಸು ದೇವರ ರಾಜ್ಯದ ಕುರಿತು ಸುವಾರ್ತೆಯನ್ನು ಸಾರಲು ಮಾರ್ಗವನ್ನು ಸಿದ್ಧಮಾಡುತ್ತಿದ್ದನು (ಮಾರ್ಕ 1:14, 15). ನಾವು ನಮ್ಮ ನಂಬಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳಬೇಕೆಂದು ಯೋಹಾನನು ತೋರಿಸಿಕೊಟ್ಟನು. ನಾವು "ಮಾತಿನ ಸೇವೆ"ಯಿಂದ ತೃಪ್ತರಾಗಲಾರೆವು; ನಾವು ಮಾತಿನಿಂದ ಮತ್ತು ಕಾರ್ಯದಿಂದ ಕರ್ತನಿಗೆ ಸೇವೆ ಮಾಡಬೇಕು.

## ಸಂಶಯಗಳೊಂದಿಗೆ ವ್ಯವಹರಿಸುವದು (11:2-6)

ಜೀವನದಲ್ಲಿ ಕೆಲವು ಸಾರಿ, ಹೆಚ್ಚು ಕಡಿಮೆ ಪ್ರತಿಯೊಬ್ಬ ಕ್ರೈಸ್ತರು ಸಂಶಯದೊಂದಿಗೆ ವ್ಯವಹರಿಸುವವರಾಗಿದ್ದಾರೆ. ಈ ಸಮಯಗಳು ಕೆಲವು ಸಾರಿ ಹೆಚ್ಚಿನ ಸಂಕಷ್ಟ ಸಮಯದಲ್ಲಿ, ಹಣಕಾಸಿನ ಸಮಸ್ಯೆಗಳಲ್ಲಿ, ಸಂಬಂಧದ ಹೋರಾಟಗಳಲ್ಲಿ, ಆರೋಗ್ಯ ಸಮಸ್ಯೆಯಲ್ಲಿ, ಮತ್ತು ತಮ್ಮ ಪ್ರಿಯರು ಮರಣಹೊಂದಿದಾಗ ಬರುತ್ತವೆ. ಸಂಶಯಗಳು ನಮಗೆ ಆಶ್ಚರ್ಯವುಂಟುಮಾಡಬಾರದು; ಯೋಹಾನನು ಸೆರಮನೆಯಲ್ಲಿದ್ದರೂ ಅಂಥಹ ಪರಿಸ್ಥಿತಿಯನ್ನು ಎದುರಿಸಿದನು ಅದರಂತೆ ನಾವು ಸಹ ಇರಬೇಕು. ಆತನ ಉದಾಹರಣೆಯನ್ನು ನಾವು ಸಂಶಯಗಳ ಕುರಿತಾಗಿ ನಂಬಿಗಸ್ತರಾಗಿದ್ದು ಅವುಗಳನ್ನು ಕ್ರಿಸ್ತನೆಡೆಗೆ ತೆಗೆದುಕೊಂಡು ಹೋಗುವದರಿಂದ ನಾವು ಆತನ ಉದಾಹರಣೆಯನ್ನು ಅನುಸರಿಸಬೇಕು. ಅಂತಿಮವಾಗಿ, ಈ ಎಲ್ಲಾ ಸಂಶಯಗಳನ್ನು ತೆಗೆದುಹಾಕುವವನು ಆತನೊಬ್ಬನೆ ಸಮರ್ಥನಾಗಿದ್ದಾನೆ. ಬಹುತೇಕವಾಗಿ ನಾವು ತನ್ನ ಮಗನಿಗೆ ದೆವ್ವ ಹಿಡಿದಿರುವ ವ್ಯಕ್ತಿಯು ಪ್ರಾರ್ಥನೆ ಮಾಡಿದಂತೆ ನಾವು ಅದನ್ನೇ ಮಾಡಬೇಕು: "(ಕರ್ತನೆ) ನಾನು ನಂಬುತ್ತೇನೆ; ನನಗೆ ನಂಬಿಕೆ ಕಡಿಮೆಯಾಗಿದ್ದರೆ ಸಹಾಯ ಮಾಡು!" (ಮಾರ್ಕ 9:24; NIV). David Stewart

---

ಟಿಪ್ಪಣೆಗಳು

[1]Leon Morris, *The Gospel According to Matthew,* Pillar Commentary (Grand Rapids, Mich.: Wm. B. Eerdmans Publishing Co., 1992), 272. [2]Jack P. Lewis, *The Gospel According to Matthew,* Part 1, The Living Word Commentary (Austin, Tex.: Sweet Publishing Co., 1976), 158. [3]"ಹೆರೋದನ ಸಂದೇಹದಿಂದ ಕೂಡಿದ ಸಿಟ್ಟು" ಯೋಹಾನನ್ನು Machaerus ಕೋಟೆ ಹತ್ತಿರ ಗಲ್ಲಿಗೆ ಹಾಕಿದ್ದಾರೆಂದು Josephus ಗಮನಿಸಿದ್ದಾರೆ (Josephus *Antiquities* 18.5.2). [4]Michael J. Wilkins, "Matthew," in *Zondervan Illustrated Bible Backgrounds Commentary,* vol. 1, *Matthew, Mark, Luke,* ed. Clinton E. Arnold (Grand Rapids, Mich.: Zondervan, 2002), 72; **ನೋಡಿರಿ** Josephus Wars 7.6.2. [5]See Donald A. Hagner, *Matthew 1—13,* Word Biblical Commentary, vol. 33A (Dallas: Word Books, 1993), 300. [6]Morris, 277. [7]Josephus *Wars* 1.24.3. [8]ಮಲಾಕಿ 3:1ರಿಂದ ಈ ಉಲ್ಲೇಖನವನ್ನು ಯೇಸು ತೆಗೆದುಕೊಂಡಿದ್ದಾರೆ. "ನನ್ನ" (ಕರ್ತನನ್ನು ಸೂಚಿಸುತ್ತದೆ) ಎಂಬ ಉಪಪದವು "ನೀನು" (ಆತನ ಮೆಸ್ಸೀಯನನ್ನು ಸೂಚಿಸಲು) ಎಂದು ಬದಲಾಯಿಸಲಾಗಿದೆ. [9]ನೋಡಿರಿ ಮತ್ತಾಯ 5:19; 10:42; 18:1-4; 20:25-28; 25:40, 45. [10]Lewis, 161.

[11]ನೋಡಿರಿ Sirach 48:1, 10; Mishnah *Eduyoth* 8.7; *Sotah* 9.15. ಹಲವರು ಯೇಸುವನ್ನು ಎಲೀಯನೆಂದು ತಪ್ಪಾಗಿ ಗುರುತಿಸಿದರು (16:14), ಮತ್ತಿತರರು ಯೇಸು ಶಿಲುಬೆಗೆ ಹಾಕಲ್ಪಟ್ಟಾಗ ಎಲೀಯನನ್ನು ಕರೆದರೆಂದು ತಪ್ಪಾಗಿ ಯೋಚಿಸುತ್ತಾರೆ (27:46, 47). [12]Josephus *Against Apion* 2.27. [13]ಯೇಸುವನ್ನು ದೆವ್ವಹಿಡಿದವನೆಂದು ಆರೋಪಿಸಿದರು (9:34; 10:25; 12:24; Jn. 7:20; 8:48, 52; 10:20). [14]ಬೈಬಲ್ ಕಾಲದಲ್ಲಿನ ದ್ರಾಕ್ಷರಸದ ಕುರಿತ ವಿವರಣೆಗಳಿಗೆ, ನೋಡಿ Duane F. Watson, "Wine," *in Dictionary of Jesus and the Gospels,* ed. Joel B. Green and Scot McKnight (Downers Grove, Ill.: InterVarsity Press, 1992), 870–73. [15]Lewis, 163.